Generated On:23-01-25 06:40

**Office of the Director General of Police**
Commandant General, Home Guards & Director of Civil Defence and Director General Karnataka State Fire & Emergency Services
No. 1, Annaswamy Mudaliar Road
Banglore - 560 042

Phone : 25570733
: 22971501
Fax : 22971512

# KARNATAKA STATE FIRE & EMERGENCY SERVICES

## CLEARANCE CERTIFICATE

ಹಸ್ತಚಾಲಿತ ಫೈಲ್ ಸಂಖ್ಯೆ: 23/01/2025

ಡಾಕೆಟ್ ಸಂಖ್ಯೆ: KSFES/CC/764/2024

ಗೆ,

The Chief Commissioner,
BBMP,
Corporation circle,
Hudson Circle,
Bangalore - 560 002.

ಮಾನ್ಯರೆ,

ವಿಷಯ: Sy.no. 13/19, 13/5, 13/6a, 13/6b, 13/7 & 13/5, Jakkur Village, Yelahanka Hobli, Bangalore North Taluk, Bangalore North, BANGALORE - 560064 ರಲ್ಲಿ ನಿರ್ಮಿಸಿರುವ ಬಹುಮಹಡಿ Educational ಕಟ್ಟಡಗಳಿಗೆ ಸ್ವಾಧೀನತೆ ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ. ಡಾಕೆಟ್ ಸಂಖ್ಯೆ ದಿನಾಂಕ .
2 ) M/S. THE HDFC SCHOOL and Sy.no. 13/19, 13/5, 13/6a, 13/6b, 13/7 & 13/5, Jakkur Village, Yelahanka Hobli, Bangalore North Taluk, Bangalore North, BANGALORE - 560064 ರವರ ಪತ್ರ ದಿನಾಂಕ 09/09/2024

..........................................................................................

ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ಜಕ್ಕೂರು ಗ್ರಾಮದ ಸರ್ವೇ ನಂ. 13/19, 13/5, 13/6ಎ, 13/6ಬಿ, 13/7 & 13/5 ಇಲ್ಲಿ Managing Director, M/s. HDFC School, Bengaluru ಇವರು ನಿರ್ಮಾಣ ಮಾಡಲು ಉದ್ದೇಶಿಸಿರುವ High Rise Education Building of 22.20 mtrs. in height, comprising of common basement, ground and 05 upper floors ಕಟ್ಟಡಕ್ಕೆ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ದಿನಾಂಕ: 03-11-2020 ರಲ್ಲಿ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ. ತದನಂತರದಲ್ಲಿ ಕಟ್ಟಡ ನಿರ್ಮಾಣದಾರರ ಕೋರಿಕೆಯನ್ವಯ ಸದರಿ ಕಟ್ಟಡದ ದಕ್ಷಿಣ ಭಾಗದ ಸ್ವಾಧೀನತೆಗಾಗಿ ದಿನಾಂಕ: 26-02-2021 ರಲ್ಲಿ ಹಾಗೂ ಕಟ್ಟಡದ ಉತ್ತರ ಭಾಗದ ಸ್ವಾಧೀನತೆಗಾಗಿ ದಿನಾಂಕ: 05-04-2023 ರಲ್ಲಿ ಭಾಗಶಃ ಕ್ಲಿಯರೆನ್ಸ್ ಪತ್ರವನ್ನು ನೀಡಲಾಗಿರುತ್ತದೆ ಮತ್ತು Extension of Auditorium block comprising of Lower ground, ground, 1st and 2nd floor ಕಟ್ಟಡದ ನಿರ್ಮಾಣಕ್ಕೆ ದಿನಾಂಕ: 13-01-2023 ರಲ್ಲಿ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ.

ಪ್ರಸ್ತುತ ಕಟ್ಟಡದ ನಿರ್ಮಾಪಕರಾದ M/S. THE HDFC SCHOOL ರವರು ತಮ್ಮ ಉಲ್ಲೇಖಿತ ಪತ್ರದಲ್ಲಿ ಸದರಿ ಕಟ್ಟಡಗಳ ಪೈಕಿ ನಿರ್ಮಾಣ ಹಾಗೂ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿರುತ್ತಾರೆ.

ಅದರಂತೆ, ಕಟ್ಟಡದ ನಿರ್ಮಾಣದಾರರು ನಿರ್ಮಿಸಲಾಗಿರುವ ಸದರಿ Auditorium Block ಕಟ್ಟಡದ ನಿರ್ಮಾಣ ಮತ್ತು ಅಗ್ನಿಶಮನ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿ ದಿನಾಂಕ: 02-09-2024 ರಲ್ಲಿ ಸಲ್ಲಿಸಲಾದ ಕೋರಿಕೆಯನ್ವಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಉಪ ನಿರ್ದೇಶಕರು(ತರಬೇತಿ & ಎಸ್.ಡಿ.ಆರ್.ಎಫ್) ರವರು ದಿನಾಂಕ: 29-10-2024 ರಂದು ಸದರಿ ಕಟ್ಟಡವನ್ನು ನಿರೀಕ್ಷಣೆ ಮಾಡಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ದಿನಾಂಕ. 13-01-2023 ರಲ್ಲಿ ನೀಡಿರುವ ಪರಿಷ್ಕೃತ ನಿರಾಕ್ಷೇಪಣಾ ಪತ್ರದಂತೆ ಅಗ್ನಿರಕ್ಷಣೆ ಮತ್ತು ಅಗ್ನಿ ನಿಯಂತ್ರಣ, ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿ, ಕಟ್ಟಡದಲ್ಲಿನ ನಿವಾಸಿ/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತು ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸ್ವಾಧೀನತೆಯ ತರುವಾಯ ಅದರಲ್ಲಿನ ನಿವಾಸಿ/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತು ತರಬೇತಿಗೆ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ಅಭಿಪ್ರಾಯಿಸಿ, ಕ್ಲಿಯರೆನ್ಸ್ ಪತ್ರವನ್ನು ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ Managing Director, M/s. HDFC School, Bengaluru ರವರು ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ಜಕ್ಕೂರು ಗ್ರಾಮದ ಸರ್ವೇ ನಂ. 13/19, 13/5, 13/6ಎ, 13/6ಬಿ, 13/7 & 13/5 ಇಲ್ಲಿ ನಿರ್ಮಿಸಲಾಗಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡದ Auditorium Block of 13.20 mtrs. in height, comprising of Lower ground, ground, 1st and 2nd floor ಕಟ್ಟಡಕ್ಕೆ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ. GBC(1)331/2017 ಡಾಕೇಟ್ ನಂ. KSFES/NOC/429/2022, ದಿನಾಂಕ: 03-11-2020 ಹಾಗೂ ದಿನಾಂಕ: 13-01-2023 ರ ಪರಿಷ್ಕೃತ ನಿರಾಕ್ಷೇಪಣಾ ಪತ್ರದಲ್ಲಿ ತಿಳಿಸಲಾದಂತೆ ಅಗ್ನಿರಕ್ಷಣೆ ಮತ್ತು ಅಗ್ನಿ ನಿಯಂತ್ರಣ ಮತ್ತು ಅಗ್ನಿ ನಂದಿಸುವ ಉಪಕರಣಗಳನ್ನು ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕೆಂದು ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಕಟ್ಟಡಗಳ ಸ್ವಾಧೀನತಾ ಪ್ರಮಾಣ ಪತ್ರ ನೀಡಲು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಯಾವ ಆಕ್ಷೇಪಣೆಯೂ ಇಲ್ಲವೆಂದು ತಿಳಿಸಲಾಗಿದೆ.

ಕಟ್ಟಡ ನಿರ್ಮಾಪಕರು ದಿನಾಂಕ 30/10/2024 ರಂದು ಒಪ್ಪಿರುವಂತೆ ಸಲ್ಲಿಸಿರುವ ಮುಚ್ಚಳಿಕೆ ಪತ್ರದಂತೆ ಕಟ್ಟಡದಲ್ಲಿನ ಶೇಕಡಾ 40 ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಆಕಾಡೆಮಿಯಲ್ಲಿ ಸೂಕ್ತ ತರಬೇತಿಯನ್ನು 6 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿಗೊಳಪಟ್ಟಿದೆ.

ಅಲ್ಲದೆ ಸದರಿ ಕಟ್ಟಡಗಳ ಆವರಣದ ಯಾವುದೇ ಭಾಗದಲ್ಲಿ ಎಲ್‌ಪಿಜಿ ಅಥವಾ ಹೆಚ್‌ಎಸ್‌ಡಿ ಇತ್ಯಾದಿಗಳನ್ನು ಶೇಖರಣೆ ಮಾಡಲು ಉದ್ದೇಶಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯತಕ್ಕದ್ದು.

ಈ ಕ್ಲಿಯರೆನ್ಸ್ ಪತ್ರವು ಸರ್ಕಾರಿ ಆದೇಶ ಸಂ. ಒಇ 33 ಕಅಸೇ 2011 ದಿನಾಂಕ 07/07/2011 ರಂತೆ, ಈ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಕ್ಲಿಯರೆನ್ಸ್ ಪತ್ರವನ್ನು ದಿನಾಂಕ 23/01/2027 ರೊಳಗೆ ನವೀಕರಿಸುವಂತೆ ತಿಳಿಸಲಾಗಿದೆ.

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಕಟ್ಟಡದಲ್ಲಿ ಇಲಾಖಾ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನದ ಉಪಕರಣಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನನ್ವಯ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಅಥವಾ ಕಟ್ಟಡದಲ್ಲಿ ಯಾವುದೇ ಹೆಚ್ಚುವರಿ ನಿರ್ಮಾಣ ಮಾಡಿದರೆ, ಅಥವಾ ಯಾವುದೇ ರೀತಿ ಖಾಯಂ/ತಾತ್ಕಾಲಿಕ ಅಡಚಣೆಗಳನ್ನುಂಟು ಮಾಡಿದರೆ ಹಾಗೂ ಮೇಲೆ ವಿವರಿಸಲಾದ ಬಾಕಿ ಉಳಿದಿರುವ ಶಿಫಾರಸ್ಸುಗಳನ್ನು ಮುಚ್ಚಳಿಕೆ ಪತ್ರದಲ್ಲಿ ಒಪ್ಪಿಕೊಂಡಂತೆ ಅಳವಡಿಸದಿದ್ದರೆ, ಈ ಕ್ಲಿಯರೆನ್ಸ್ ಪತ್ರ ಅನೂರ್ಜಿತ ಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

Director of Fire & Emergency Services, Karnataka

ತಮ್ಮ ವಿಶ್ವಾಸಿ,

ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು.

ಪ್ರತಿ:

1. Managing Director, M/s. HDFC School, D. No.406, Casa Ansala Apartment, J.P Nagar 3rd phase, Bannerughatta Road, Bangalore – 560 076. 2. ಉಪ ನಿರ್ದೇಶಕರು(Trg. & SDRF), ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.

Digitally signed by T N SHIVASHANKARA
Date: 2025.01.24 10:37:34 +05:30
Reason: Approved